ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು : ಶ್ರೀ ಎನ್. ಬಸವಯ್ಯನವರು ದಿನಾಂಕ 21ನೇ ಆಗಸ್ಟ್ 1995 ರಂದು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ.

"ಶ್ರೀ ಎನ್. ಬಸವಯ್ಯನವರು ದಿನಾಂಕ 21ನೇ ಆಗಸ್ಟ್ 1995 ರಿಂದ ಈ ಅಧಿವೇಶನ ಮುಕ್ತಾಯವಾಗುವರೆಗೆ ಗೈರು ಹಾಜರಾಗಲು ಅನುಮತಿ ಕೋರಿದ್ದಾರೆ."

"ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?"

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು : ಮಾನ್ಯ ಸದಸ್ಯರು ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.

ವರದಿಗಳನ್ನೊಪ್ಪಿಸುವುದು

ಶ್ರೀ ಹೆಚ್.ಎನ್. ನಂಜೇಗೌಡ (ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, ನಾನು ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ 1 ರಿಂದ 7ರ ವರೆಗಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

(1) ದ.ಕ. ಜಿಲ್ಲೆಯಲ್ಲಿ ಕೊಜೆಂಟ್ರಿಕ್ಸ್, ಎಂ.ಆರ್.ಪಿ.ಎಲ್. ಹಾಗೂ ಇತರ ಬೃಹತ್ ಕೈಗಾರಿಕೆಗಳಿಂದ ಉಂಟಾಗಲಿರುವ ವಾಯು ಮತ್ತು ಜಲಮಾಲಿನ್ಯ

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾದ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಸ್ಥಾಪನೆಗೊಂಡಿರತಕ್ಕಂತಹ ಎಂ.ಆರ್.ಪಿ.ಎಲ್. ಹಾಗೂ ಇನ್ನೂ ಸ್ಥಾಪನೆಗೊಳ್ಳಲಿರುವ ಕೊಜೆಂಟ್ರಿಕ್ಸ್ ಮತ್ತು ಇತರ ಬೃಹತ್ ಕೈಗಾರಿಕೆಗಳಿಂದ ಆಗತಕ್ಕಂತಹ ವಾಯು ಹಾಗೂ ಜಲಮಾಲಿನ್ಯದ ಬಗ್ಗೆ ಜಿಲ್ಲೆಯ ಪರಿಸರವಾದಿಗಳು ಮತ್ತು ಮೀನುಗಾರರು ಸಾಕಷ್ಟು ದೊಡ್ಡ ರೀತಿಯಲ್ಲಿ ಚಳುವಳಿಯನ್ನು ಪ್ರಾರಂಭಿಸಿದ್ದಾರೆ. ಜಿಲ್ಲೆಯಲ್ಲಿ ಅದರಲ್ಲೂ ಕೂಡ ಒಂದು ಕಡೆ ಪಶ್ಚಿಮ ಘಟ್ಟಗಳ ನಾಶ; ಇನ್ನೊಂದು ಕಡೆ ಸಮುದ್ರ ಮಾಲಿನ್ಯ ಮತ್ತೊಂದು ಕಡೆ ಕುಡಿಯುವ ನೀರಿನ ಅಭಾವ, ಹೀಗೆ ಹತ್ತು ಹಲವು ವಿಚಾರಗಳ ಬಗ್ಗೆ ನಮ್ಮ ಸದನ ಬಹಳ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ಇದೇ 21 ರಂದು ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರ ಸಮುದಾಯ ಎಂ.ಆರ್.ಪಿ.ಎಲ್. ಕಂಪನಿಯವರು ಈಗಾಗಲೇ ತ್ಯಾಜ್ಯ ವಸ್ತುಗಳನ್ನು ಸಮುದ್ರಕ್ಕೆ ಬಿಡಲು ಹಾಕಿರತಕ್ಕಂತಹ ಪೈಪುಗಳನ್ನು ಕಿತ್ತು ಹಾಕುವಂತಹ ಒಂದು ಹೋರಾಟವನ್ನು ಪ್ರಾರಂಭಿಸುತ್ತಿದ್ದಾರೆ ಮತ್ತೊಂದು ಎಡೆ ಕೊಜೆಂಟ್ರಿಕ್ಸ್ ವಿರುದ್ಧ ಸಾಕಷ್ಟು ರೀತಿಯ ಜನಾಭಿಪ್ರಾಯ ರೂಪುಗೊಂಡಿದ್ದು, ಸರ್ಕಾರ ಈ ಒಪ್ಪಂದಕ್ಕೆ ಒಂದು ವೇಳೆ ಸಹಿ ಹಾಕಿದ್ದೇ ಆದರೆ ಜಿಲ್ಲೆಯಲ್ಲಿ ಉಗ್ರ ರೂಪದ ಚಳುವಳಿ ಪ್ರಾರಂಭವಾಗುವುದು ಕಂಡು ಬರುತ್ತಿದೆ. ಈ ದಿಸೆಯಲ್ಲಿ ದಯವಿಟ್ಟು ಸರ್ಕಾರದ ಗಮನವನ್ನು ಸೆಳೆಯಲು ಅವಕಾಶವನ್ನು ಕೊಟ್ಟಿದ್ದೀರಿ ಆದರೂ ಕೂಡ ಸಾರ್ವಜನಿಕ ಒಂದು ಮಹತ್ವದ ದೃಷ್ಟಿಯಿಂದ ಇದನ್ನು ನಿಯಮಾವಳಿ 69 ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿ ತಮ್ಮ ಹತ್ತಿರ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು ಅಲೋಚನೆ ಮಾಡೋಣ.